## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 2104(2513) |
| ಸದಸ್ಯರ ಹೆಸರು : | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 23-03-2022 |
| ಉತ್ತರಿಸಬೇಕಾದ ಸಚಿವರು : | ಮಾನ್ಯ ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಮದ್ದೂರು ತಾಲ್ಲೂಕು, ಆತಗೂರು ಹೋಬಳಿಯಲ್ಲಿ ಮುತ್ತುರಾಯನ ಕೆರೆ ಪೋಷಕ ನಾಲೆಯ ನಿರ್ಮಾಣಕ್ಕೆ ರೈತರ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆಯೇ; (ಗ್ರಾಮವಾರು/ ಸರ್ವೆ ನಂಬರ್‌ವಾರು/ ವಿಸ್ತೀರ್ಣವಾರು/ ವಿಳಾಸವಾರು ಮಾಹಿತಿಯನ್ನು ನೀಡುವುದು) | ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ ಇವರ ವರದಿಯನ್ವಯ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಆತಗೂರು ಹೋಬಳಿಯಲ್ಲಿ ಮುತ್ತುರಾಯನ ಕೆರೆ ಪೋಷಕ ನಾಲೆಯ ನಿರ್ಮಾಣಕ್ಕಾಗಿ ನವಿಲೆ, ಹೆಬ್ಬೆರಳು ಮತ್ತು ಅಂಕನಾಥಪುರ ಗ್ರಾಮಗಳಲ್ಲಿನ ಒಟ್ಟು 57-25½ ಎಕರೆ ಜಮೀನನ್ನು ಎರಡು ಹಂತಗಳಲ್ಲಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.<br>(ವಿವರ ಅನುಬಂಧದಲ್ಲಿ ಒದಗಿಸಿದೆ.) |
| ಆ) | ಸದರಿ ಭೂಸ್ವಾಧೀನಪಡಿಸಿಕೊಂಡಿರುವ ರೈತರ ಜಮೀನುಗಳಿಗೆ ಪರಿಹಾರವನ್ನು ನೀಡಲಾಗಿದೆಯೇ; ಪ್ರತಿ ಗುಂಟೆಗೆ ನಿಗಧಿಪಡಿಸಲಾಗಿರುವ ಪರಿಹಾರದ ಮೊತ್ತ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ನೀಡುವ ಸಂಬಂಧ ಒಟ್ಟು ರೂ.57,13,746/-ಗಳ ಮೊತ್ತದ ಐತೀರ್ಪು ಅನುಮೋದನೆಯಾಗಿರುತ್ತದೆ.<br>ಸ್ವಾಧೀನಪಡಿಸಿಕೊಂಡ ಜಮೀನಿಗೆ ಈ ಕೆಳಕಂಡಂತೆ ಪರಿಹಾರ ನಿಗಧಿಪಡಿಸಲಾಗಿದೆ. |

**ಮೊದಲನೇ ಹಂತ**

| ಕ್ರ. ಸಂ. | ಗ್ರಾಮ | ಜಮೀನಿನ ತರಹೆ | | |
|---|---|---|---|---|
| | | ಖುಷ್ಕಿ ಪ್ರತಿ ಗುಂ. ರೂ.ಗಳಲ್ಲಿ | ತರಿ ಪ್ರತಿ ಗುಂ. ರೂ.ಗಳಲ್ಲಿ | ಭಾಗಾಯ್ತು ಪ್ರತಿ ಗುಂ. ರೂ.ಗಳಲ್ಲಿ |
| 1 | ನವಿಲೆ | 855/- | - | - |
| 2 | ಹೆಬ್ಬೆರಳು | 1110/- | 1304/- | - |
| 3 | ಅಂಕನಾಥಪುರ | 1114/- | 2500/- | - |
| **ಎರಡನೇ ಹಂತ** | | | | |
| 1 | ನವಿಲೆ | 2566/- | - | - |
| 2 | ಹೆಬ್ಬೆರಳು | 3932/- | - | - |
| 3 | ಅಂಕನಾಥಪುರ | 4256/- | - | - |

| | | |
|---|---|---|
| ಇ) | ಭೂಸ್ವಾಧೀನಪಡಿಸಿಕೊಂಡ ಜಮೀನಿನ ರೈತರ ಹೆಸರುಗಳು ಪಟ್ಟಿಯಲ್ಲಿ ಬಿಟ್ಟು ಹೋಗಿರುವುದಾಗಿ ತಿಳಿಸಿ ಪರಿಹಾರ ನೀಡುವಂತೆ ಕೋರಿ ಇಲ್ಲಿಯವರೆಗೆ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; (ಸರ್ವೆ ನಂಬರ್/ಹೆಸರು/ವಿಳಾಸ ಸಹಿತ ಮಾಹಿತಿಯನ್ನು ನೀಡುವುದು) | ಈ ಬಗ್ಗೆ ಎರಡು ಅರ್ಜಿಗಳು ಸ್ವೀಕೃತವಾಗಿರುತ್ತವೆ.<br>1. ಅಂಕನಾಥಪುರ ಗ್ರಾಮದ ಸರ್ವೆ ನಂ:8 (ರೀ.ಸರ್ವೆ ನಂ:299), ಶ್ರೀಮತಿ ಸಿದ್ದರೂರಮ್ಮ ಕೋಂ ಲೇ.ವೀರಾಜಯ್ಯ, ಅಂಕನಾಥಪುರ ಗ್ರಾಮ.<br>2. ಅಂಕನಾಥಪುರ ಗ್ರಾಮದ ಸರ್ವೆ ನಂ: 363ಆರ್‌ಎಸ್1 (ಹಳೇ ನಂ:45/10), ಶ್ರೀ ನಿಂಗಪ್ಪ ಬಿನ್ ಲೇ.ಚಿಕ್ಕಯ್ಯ, ಅಂಕನಾಥಪುರ ಗ್ರಾಮ |
| ಈ) | ನಾಲೆಯ ನಿರ್ಮಾಣ ಸಂದರ್ಭದಲ್ಲಿ ಅಂದಾಜು ಮಾಡಿರುವುದು ಒಂದೆಡೆಯಾದರೆ, ಪ್ರಸ್ತುತ ಕಾಲುವೆಯು ಹೋಗಿರುವುದು ಮತ್ತೊಂದೆಡೆಯಾಗಿದ್ದಾಗಿ ತಿಳಿಸಿ ಪರಿಹಾರವನ್ನು ಕೋರಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; (ಗ್ರಾಮವಾರು/ಸರ್ವೆ ನಂಬರ್‌ವಾರು/ ಜಮೀನುವಾರು/ ವಿಳಾಸವಾರು ಮಾಹಿತಿಯನ್ನು ನೀಡುವುದು) | ಈ ಬಗ್ಗೆ ಯಾವುದೇ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ. |
| ಉ) | ನಾಲೆಯ ನಿರ್ಮಾಣಕ್ಕೆ ಸರ್ವೆ ನಂಬರ್‌ನ ಜಮೀನು ಒಬ್ಬರದಾದರೆ ಪರಿಹಾರದ ಪಟ್ಟಿಯಲ್ಲಿ ಮತ್ತೊಬ್ಬರ ರೈತರ ಹೆಸರು ಇರುವುದು ಕಂಡು ಬಂದಿದೆಯೇ; (ವಿವರ ನೀಡುವುದು) ಬಂದಿದ್ದಲ್ಲಿ, ಈ ಬಗ್ಗೆ ಪರಿಹಾರ ಕೋರಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಹಾಗೂ ಈ ಅರ್ಜಿಗಳ ಸಂಬಂಧ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಕೋರಿಕಾ ಇಲಾಖೆಯ ಪ್ರಸ್ತಾವನೆಯಂತೆ ಜಂಟಿ ಅಳತೆ ತಃಖ್ತೆ ತಯಾರಿಸಿ ದಾಖಲಾತಿಗಳನ್ನು ಪಡೆದು ಭೂಸ್ವಾಧೀನ ಕಾಯ್ದೆ-1894ರ ಕಲಂ-6(1)ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ.<br>ಅಧಿಸೂಚನೆಯನ್ನು ತಿದ್ದುಪಡಿ ಮಾಡುವಂತೆ ಎರಡು ಅರ್ಜಿಗಳು ಸ್ವೀಕೃತವಾಗಿದ್ದು, ಭೂಸ್ವಾಧೀನ ಕಾಯ್ದೆಯಡಿ ಅಂತಿಮ ಅಧಿಸೂಚನೆಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲವೆಂದು ತಿಳಿಸಲಾಗಿದೆ. |

**ಸಂಖ್ಯೆ: ಕಂಇ 05 ಭೂಸ್ವಾಮ 2022**

**(ಆರ್.ಅಶೋಕ)**

ಕಂದಾಯ ಸಚಿವರು